ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-10-1971.

## *ಕರ್ಮದ ಆಧಾರ ವೃತ್ತಿ* (कर्म का आधार वृत्ति)

ಇಂದು ಪ್ರವೃತ್ತಿಯಲ್ಲಿರುವ ಪಾಂಡವ ಸೇನೆಯ ಭಟ್ಟಿ ಆರಂಭವಾಗಿದೆ. ತಮ್ಮನ್ನು ಪಾಂಡವರೆಂದು ತಿಳಿಯುತ್ತೀರಾ? ನಿರಂತರ ಪಾಂಡವ ಸ್ವರೂಪ ಸ್ಮೃತಿಯಲ್ಲಿರುತ್ತದೆಯೇ? ಅಥವಾ ಕೆಲವೊಮ್ಮೆ ತಮ್ಮನ್ನು ಪಾಂಡವರೆಂದು ತಿಳಿಯುತ್ತೀರಿ, ಇನ್ನೂ ಕೆಲವೊಮ್ಮೆ ತಮ್ಮನ್ನು ಪ್ರವೃತ್ತಿಯವರೆಂದು ತಿಳಿಯುತ್ತೀರಾ? ನಿರಂತರ ತಮ್ಮನ್ನು ಪಾಂಡವರ ಅರ್ಥಾತ್ ಪಂಡ (ಮಾರ್ಗದರ್ಶಕ)ರೆಂದು ತಿಳಿಯುವುದರಿಂದ ಸದಾ ಯಾತ್ರೆ ಮತ್ತು ಗುರಿಯ ವಿನಃ ಮತ್ತೇನಾದರೂ ಸ್ಮೃತಿಯಲ್ಲಿರುತ್ತದೆಯೇ? ಒಂದುವೇಳೆ ಯಾವುದಾದರೂ ಸ್ಮೃತಿಯಲ್ಲಿದ್ದರೆ ಅದಕ್ಕೆ ಕಾರಣ ತಮ್ಮ ಪಾಂಡವಸ್ವರೂಪವನ್ನು ಮರೆತುಹೋಗುತ್ತೀರಿ. ಸ್ಮೃತಿ ಅರ್ಥಾತ್ ವೃತ್ತಿ, ವೃತ್ತಿ ಬದಲಾದಾಗ ಕರ್ಮವೂ ಬದಲಾಗುತ್ತದೆ. ಕರ್ಮಕ್ಕೆ ಆಧಾರ ವೃತ್ತಿಯಾಗಿದೆ. ಪ್ರವೃತ್ತಿಯೂ ಸಹ ವೃತ್ತಿಯಿಂದಲೇ ಪವಿತ್ರ ಇಲ್ಲವೆ ಅಪವಿತ್ರವಾಗುತ್ತದೆ ಆದ್ದರಿಂದ ಪಾಂಡವಸೇನೆಯು ವೃತ್ತಿಯನ್ನು ಸದಾ ಒಬ್ಬ ತಂದೆಯಜೊತೆ ಇಡುತ್ತಿದ್ದರೆ ವೃತ್ತಿಯಿಂದ ತಮ್ಮ ಉನ್ನತಿಯಲ್ಲಿ ವೃದ್ಧಿ ಮಾಡಿಕೊಳ್ಳುತ್ತೀರಿ. ವೃದ್ಧಿಯ ಕಾರಣವೂ ವೃತ್ತಿಯಾಗಿದೆ.  ವೃತ್ತಿಯಲ್ಲಿ ಏನು ಮಾಡಬೇಕು? ಒಂದುವೇಳೆ ಶ್ರೇಷ್ಠವೃತ್ತಿಯಿದ್ದರೆ ಪ್ರವೃತ್ತಿ ಶ್ರೇಷ್ಠವಾಗಿರುವುದು. ಅಂದಮೇಲೆ ವೃತ್ತಿಯಲ್ಲಿ ಏನನ್ನು ಇಟ್ಟುಕೊಳ್ಳಬೇಕು ಅದರಿಂದ ಸಹಜವಾಗಿ ವೃದ್ಧಿಯಾಗಲಿ? ವೃತ್ತಿಯಲ್ಲಿ ಸದಾ ಇದೇ ನೆನಪಿರಲಿ- 'ಒಬ್ಬ ತಂದೆಯ ವಿನಃ ಯಾರೂ ಇಲ್ಲ.' ಒಬ್ಬ ತಂದೆಯಿಂದಲೇ ಸರ್ವಸಂಬಂಧ, ಸರ್ವಪ್ರಾಪ್ತಿಯಾಗುತ್ತದೆ- ಇದು ಸದಾ ವೃತ್ತಿಯಲ್ಲಿದ್ದಾಗ ದೃಷ್ಟಿಯಲ್ಲಿ ಆತ್ಮಿಕ ಸ್ವರೂಪ ಅರ್ಥಾತ್ ಸಹೋದರತ್ವದ ದೃಷ್ಟಿಯು ಸದಾ ಇರುವುದು. ಯಾವಾಗ ಒಬ್ಬ ತಂದೆಯೊಂದಿಗೆ ಸರ್ವಸಂಬಂಧದ ಪ್ರಾಪ್ತಿಯ ವಿಸ್ಮೃತಿಯಾಗುವುದೋ ಆಗಲೇ ವೃತ್ತಿ ಚಂಚಲವಾಗುವುದು. ಒಬ್ಬ ತಂದೆಯ ವಿನಃ ಬೇರೆ ಯಾವುದೇ ಸಂಬಂಧವಿಲ್ಲದಿದ್ದಾಗ ವೃತ್ತಿ ಚಂಚಲ ಏಕಾಗುವುದು? ಶ್ರೇಷ್ಠವೃತ್ತಿ ಇದ್ದಾಗ ಚಂಚಲವೃತ್ತಿ ಆಗುವುದಿಲ್ಲ. ವೃತ್ತಿ ಶ್ರೇಷ್ಠ ಮಾಡಿಕೊಳ್ಳಿ ಆಗ ಪ್ರವೃತ್ತಿ ತಾನಾಗಿಯೇ ಶ್ರೇಷ್ಠವಾಗುವುದು ಆದ್ದರಿಂದ ವೃತ್ತಿಯನ್ನು ಶ್ರೇಷ್ಠ ಮಾಡಿಕೊಂಡಾಗ ಇದೇ ಪ್ರವೃತ್ತಿಯ ಪ್ರಗತಿಗೆ ಕಾರಣವಾಗುವುದು ಮತ್ತು ಪ್ರಗತಿಯಿಂದ ಗತಿ-ಸದ್ಗತಿಯನ್ನು ಸಹಜವಾಗಿ ಪಡೆಯುವಿರಿ. ಆಗ ಈ ಪ್ರವೃತ್ತಿಯು ಕೆಳಗಿಳಿಯಲು ಕಾರಣವಾಗುವುದಿಲ್ಲ. ಆದ್ದರಿಂದ ಪ್ರವೃತ್ತಿ ಯಲ್ಲಿರುವವರು ಪ್ರಗತಿಗಾಗಿ ವೃತ್ತಿಯನ್ನು ಸರಿಪಡಿಸಿಕೊಳ್ಳಿ ಆಗ ಈ ವೃತ್ತಿಯ ಚಂಚಲತೆಯ ಕಂಪ್ಲೇಂಟ್ ಕಂಪ್ಲೀಟ್ ಆಗಿಬಿಡುತ್ತದೆ. ಸೃತಿ ಹಾಗೂ ವೃತ್ತಿಯಲ್ಲಿ ಸದಾ ತಮ್ಮ ನಿರ್ವಾಣಧಾಮ ಹಾಗೂ ನಿರ್ವಾಣಸ್ಥಿತಿಯಿರಲಿ ಮತ್ತು ಚರಿತ್ರೆಯಲ್ಲಿ ನಿರ್ಮಾಣತೆಯಿರಲಿ.

ಈ ಮೂರೂ ನಿರ್ಮಾಣ, ನಿರ್ಮಾನ ಹಾಗೂ ನಿರ್ವಾಣ ಸ್ಮೃತಿಯಲ್ಲಿದ್ದಾಗ ಚರಿತ್ರೆ, ಕರ್ತವ್ಯ ಮತ್ತು ಸ್ಥಿತಿ ಮೂರೂ ಸಹ ಈ ಸ್ಮೃತಿಯಿಂದ ಸಮರ್ಥವಾಗಿಬಿಡುತ್ತವೆ ಅರ್ಥಾತ್ ಸ್ಮೃತಿಯಲ್ಲಿ ಸಾಮರ್ಥ್ಯ ಬಂದುಬಿಡುತ್ತದೆ. ಸಾಮರ್ಥ್ಯವಿದ್ದಲ್ಲಿ ಮೂರರಲ್ಲಿಯೂ ವಿಸ್ಮೃತಿ ಬರುವುದಿಲ್ಲ. ಅಂದ ಮೇಲೆ ವಿಸ್ಮೃತಿಯನ್ನು ಕಳೆಯುವುದಕ್ಕಾಗಿ ಈ ಸಮರ್ಥ ಸ್ಮೃತಿಯನ್ನಿಟ್ಟುಕೊಳ್ಳಿ, ಇದು ಬಹಳ ಸಹಜವಲ್ಲವೆ. ಒಂದುವೇಳೆ ಚರಿತ್ರೆಯಲ್ಲಿ ನಿರ್ಮಾಣತೆಯಿದ್ದರೆ ವಿಶ್ವಕಲ್ಯಾಣದ ಕರ್ತವ್ಯವೂ ಸಹ ತಾನಾಗಿಯೇ ನಡೆಯುವುದು. ನಿರ್ಮಾಣತೆಯೆಂದರೆ ನಿರಹಂಕಾರಿ, ನಿರ್ಮಾಣತೆಯಲ್ಲಿ ದೇಹದ ಅಹಂಕಾರವು ಸ್ವತಹ ಸಮಾಪ್ತಿಯಾಗುತ್ತದೆ. ಹೀಗೆ ನಿರ್ಮಾಣ ಸ್ಥಿತಿಯಲ್ಲಿರುವವರು ಸದಾ ನಿರ್ವಾಣ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾ ವಾಣಿಯಲ್ಲಿ ಬಂದಾಗ ವಾಣಿಯು ಯಥಾರ್ಥ ಹಾಗೂ ಶಕ್ತಿಶಾಲಿಯಾಗಿರುತ್ತದೆ. ಯಾವುದೇ ವಸ್ತು ಎಷ್ಟು ಶಕ್ತಿಶಾಲಿಯಾಗಿರುವುದೊ ಅಷ್ಟು ಕ್ವಾಂಟಿಟಿ (ಪ್ರಮಾಣ) ಕಡಿಮೆಯಿರುವುದು ಆದರೆ ಕ್ವಾಲಿಟೀಸ್ ಅಧಿಕವಾಗಿರುವುದು. ಹಾಗೆಯೇ ನಿರ್ಮಾಣ ಸ್ಥಿತಿಯಲ್ಲಿ ಸ್ಥಿತರಾಗಿ ವಾಣಿಯಲ್ಲಿ ಬಂದಾಗ ವಾಣಿಯಲ್ಲಿಯೂ ಶಬ್ದಗಳು ಕಡಿಮೆ ಆದರೆ ಹೆಚ್ಚು ಶಕ್ತಿಶಾಲಿಯಾಗಿರುತ್ತದೆ. ಈಗ ವಿಸ್ತಾರ ಹೆಚ್ಚು ಮಾಡಬೇಕಾಗುತ್ತದೆ ಆದರೆ ಹೇಗೇಗೆ ಶಕ್ತಿಶಾಲಿ ಸ್ಥಿತಿ ಮಾಡಿಕೊಳ್ಳುತ್ತಾ ಹೋಗುತ್ತೀರೋ ಅಷ್ಟು ತಮ್ಮ ಒಂದು ಶಬ್ದದಲ್ಲಿಯೇ ಸಾವಿರಾರು ಶಬ್ದಗಳ ರಹಸ್ಯ ಸಮಾವೇಶವಾಗಿರುವುದು.

ಇದರಿಂದ ವ್ಯರ್ಥವಾಣಿಯು ತಾನಾಗಿಯೇ ಸಮಾಪ್ತಿಯಾಗುವುದು. ಹೇಗೆ ಇಡೀ ಜ್ಞಾನದ ಸಾರವು ಒಂದು ಚಿಕ್ಕ ಬ್ಯಾಡ್ಜ್‌ನಲ್ಲಿ ಸಮಾವೇಶವಾಗಿದೆ, ಇಡೀ ಸಾಗರವೇ ಒಂದು ಚಿಕ್ಕಚಿತ್ರದಲ್ಲಿ ಸಾರರೂಪದಲ್ಲಿ ಸಮಾವೇಶವಾಗಿದೆ. ಹಾಗೆಯೇ ತಮ್ಮ ಒಂದುಶಬ್ದವೂ ಸರ್ವಜ್ಞಾನದ ರಹಸ್ಯಗಳಿಂದ ತುಂಬಿರುತ್ತದೆ. ಆದ್ದರಿಂದ ಈಗ ವಾಣಿಯಲ್ಲಿಯೂ ಶಕ್ತಿ ತುಂಬಬೇಕಾಗಿದೆ. ಯಾವಾಗ ವೃತ್ತಿ ಮತ್ತು ವಾಣಿ ಶಕ್ತಿಶಾಲಿಯಾಗುವುದೋ ಆಗ ಕರ್ಮವೂ ಸಹ ಸದಾ ಯಥಾರ್ಥ ಮತ್ತು ಶಕ್ತಿಶಾಲಿಯಾಗಿರುವುದು.

ಇಲ್ಲಿ ಬ್ಯಾಟರಿಯನ್ನು ಚಾರ್ಜ್ ಮಾಡಿಕೊಳ್ಳಲು ಬಂದಿದ್ದೀರಿ. ಬ್ಯಾಟರಿಯನ್ನು ಚಾರ್ಜ್ ಮಾಡಿಕೊಳ್ಳಲು ಸದಾ ತಮ್ಮನ್ನು ವಿಶ್ವನಿರ್ಮಾಣ ಮಾಡಲು ಇಂಚಾರ್ಜ್ ಎಂದು ತಿಳಿಯಿರಿ. ಒಂದುವೇಳೆ ಸದಾ ತಮ್ಮನ್ನು ಈ ಸೃಷ್ಟಿಯ ಕರ್ತವ್ಯದ ಇಂಚಾರ್ಜ್ ಎಂದು ತಿಳಿದರೆ ಸದಾ ಬ್ಯಾಟರಿ ಚಾರ್ಜ್ ಆಗಿರುವುದು. ಈ ಚಾರ್ಜ್‌ನಿಂದ ತಮ್ಮನ್ನು ವಿಸ್ಮೃತಿ ಮಾಡಿಕೊಳ್ಳುತ್ತೀರಿ ಆಗಲೇ ಬ್ಯಾಟರಿಯು ಡಿಸ್‌ಚಾರ್ಜ್ ಆಗುತ್ತದೆ ಆದ್ದರಿಂದ ಸದಾ ತಮ್ಮ ಈ ಕರ್ತವ್ಯದಲ್ಲಿ ತಮ್ಮನ್ನು ಇಂಚಾರ್ಜ್ ಎಂದು ತಿಳಿಯಿರಿ. ಮತ್ತು ಪದೇ-ಪದೇ ಬ್ಯಾಟರಿ ಚಾರ್ಜ್‌ನ ಚಾರ್ಟನ್ನು ಚೆಕ್ ಮಾಡಿಕೊಳ್ಳಿರಿ ಆಗ ಎಂದೂ ಸಂಕಲ್ಪ ಹಾಗೂ ಕರ್ಮದಲ್ಲಿ ಮತ್ತು ಆತ್ಮದ ಸ್ಥಿತಿಯಲ್ಲಿ ಡಿಸ್‌ಚಾರ್ಜ್ ಆಗುವುದಿಲ್ಲ. ನಂತರ ಈ ಕಂಪ್ಲೇಂಟ್ ಕಂಪ್ಲೀಟ್ ಆಗಿಬಿಡುವುದು. ಇದೂ ಸಹ ಕಂಪ್ಲೇಂಟ್ ಆಗಿದೆಯಲ್ಲವೆ. ಎಲ್ಲರಲ್ಲಿ ಹೆಚ್ಚು ಈ ಕಂಪ್ಲೇಂಟ್ ಇದೆ, ಇದಕ್ಕೆ ಕಾರಣವೇನೆಂದರೆ ತಮ್ಮನ್ನು ಸದಾ ಇಂತಹ ಶ್ರೇಷ್ಠಕರ್ಮಕ್ಕೆ ಇಂಚಾರ್ಜ್ ಎಂದು ತಿಳಿದುಕೊಳ್ಳುವುದಿಲ್ಲ. “ಯಾವ ಕರ್ಮವನ್ನು ನಾನು ಮಾಡುವೆನೋ ನನ್ನನ್ನು ನೋಡಿ ಅನ್ಯರು ಮಾಡುವರು” ಇದಂತೂ ಇದ್ದೇ ಇದೆ ಆದರೆ ಈ ಸ್ಲೋಗನ್ ಇನ್ನೂ ಗುಹ್ಯರೂಪದಿಂದ ಹೇಗೆ ಧಾರಣೆ ಮಾಡಿಕೊಳ್ಳಬೇಕೆಂಬುದನ್ನು ತಿಳಿದಿದ್ದೀರಾ? ಈ ಪಾಂಡವರ ಭಟ್ಟಿಗೆ ಈ ಗುಹ್ಯವಾದ ಸ್ಲೋಗನ್ ಆವಶ್ಯಕವಾಗಿದೆ. ಅದು ಯಾವುದು? ಹೇಗೆ ನಾನು ಯಾವ ಕರ್ಮ ಮಾಡುವೆನೋ ಅದನ್ನು ನೋಡಿ ಅನ್ಯರೂ ಮಾಡುವರು ಎಂಬ ಸ್ಲೋಗನ್ ತಿಳಿಸಿದೆವೋ. ಹಾಗೆಯೇ ನಾನು ನಿಮಿತ್ತನಾಗಿರುವ ಆತ್ಮನ ವೃತ್ತಿಯಂತೆ ವಾಯುಮಂಡಲವಾಗುವುದು. ನನ್ನ ವೃತ್ತಿಯಂತೆ ವಾಯುಮಂಡಲ, ಅಂದಮೇಲೆ, ವಾಯುಮಂಡಲವನ್ನು ಪರಿವರ್ತನೆಯಲ್ಲಿ ತರುವುದು ವೃತ್ತಿಯಾಗಿದೆ. ಕರ್ಮಕ್ಕಿಂತಲೂ ವೃತ್ತಿ ಸೂಕ್ಷ್ಮವಾಗಿದೆ. ಈಗ ಕೇವಲ ಕರ್ಮದ ಮೇಲೆ ಗಮನ ಕೊಡಬೇಡಿ, ವೃತ್ತಿಯಿಂದ ವಾಯುಮಂಡಲವನ್ನು ತಯಾರು ಮಾಡುವ ಇಂಚಾರ್ಜ್ ನಾನಾಗಿದ್ದೇನೆ. ವಾಯುಮಂಡಲವನ್ನು ಯಾರು ಸತೋಪ್ರಧಾನ ಮಾಡುವರು? ತಾವೆಲ್ಲರೂ ನಿಮಿತ್ತರಾಗಿದ್ದೀರಲ್ಲವೆ. ಒಂದುವೇಳೆ ಈ ಸ್ಲೋಗನ್ ಸದಾ ಸ್ಮೃತಿಯಲ್ಲಿದ್ದರೆ ವೃತ್ತಿಯು ಚಂಚಲವಾಗುವುದೇ? ಮಗುವೂ ಸಹ ಯಾವಾಗ ಚಂಚಲವಾಗುತ್ತದೆ? ಖಾಲಿಯಾಗಿದ್ದಾಗ, ಯಾವಾಗ ವೃತ್ತಿಯಲ್ಲಿ ಇಷ್ಟು ದೊಡ್ಡ ಕಾರ್ಯದ ಸ್ಮೃತಿಯು ಕಡಿಮೆಯಿರುವುದೋ ಆಗ ವೃತ್ತಿ ಚಂಚಲವಾಗುವುದು. ಒಂದುವೇಳೆ ಯಾವುದೇ ಅತೀ ಚಂಚಲವಾದ ಮಗು ಬ್ಯುಜಿಯಾಗಿದ್ದಾಗಲೂ ಚಂಚಲತೆ ಬಿಡಲಿಲ್ಲವೆಂದರೆ ಅದಕ್ಕೆ ಇನ್ನಾವ ಸಾಧನವಿದೆ? ಇದೇ ಕಂಪ್ಲೇಂಟ್ ಇದುವರೆಗೂ ಉಳಿದುಕೊಂಡಿದೆ- ವೃತ್ತಿಯನ್ನು ನೆನಪಿನಲ್ಲಿ, ಜ್ಞಾನದಲ್ಲಿ ಬ್ಯುಜಿಯಾಗಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತೇವೆ ಆದರೂ ಚಂಚಲವಾಗುತ್ತದೆ ಎಂದು ಹೇಳುತ್ತಾರೆ. ಇಂತಹವರು ಏನು ಮಾಡಬೇಕು? ಅದಕ್ಕಾಗಿ ಹೇಗೆ ಚಂಚಲವಾದ ಮಗುವನ್ನು ಯಾವುದಾದರೊಂದು ಪ್ರಕಾರದಿಂದ ಯಾವುದಾದರೂ ಬಂಧನದಲ್ಲಿ ಬಂಧಿಸುವ ಪ್ರಯತ್ನ ಮಾಡಲಾಗುತ್ತದೆ. ಅದು ಸ್ಥೂಲಬಂಧನವೂ ಆಗಿರಬಹುದು. ವಾಣಿಯ ಮೂಲಕ ಯಾವುದಾದರೊಂದು ಪ್ರಾಪ್ತಿಯ ಆಧಾರವನ್ನು ಕೊಟ್ಟು ಅವರನ್ನು ತಮ್ಮ ಸ್ನೇಹದಲ್ಲಿ ಬಂಧಿಸಲಾಗುತ್ತದೆ. ಹಾಗೆಯೇ ಬುದ್ಧಿ ಹಾಗೂ ಸಂಕಲ್ಪವನ್ನೂ ಸಹ ಯಾವುದಾದರೊಂದು ಬಂಧನಗಳಲ್ಲಿ ಬಂಧಿಸಬೇಕಾಗುವುದು- ಆ ಬಂಧನ ಯಾವುದು? ಎಲ್ಲಿಯೇ ಬುದ್ಧಿಯು ಹೋಗುತ್ತದೆಯೆಂದರೆ ಅದನ್ನು ಮೊದಲು ಪರಿಶೀಲನೆ ಮಾಡಿಕೊಳ್ಳಿರಿ. ಪರಿಶೀಲಿಸಿದನಂತರ ಎಲ್ಲಿ ಸಂಕಲ್ಪ ಹಾಗೂ ವೃತ್ತಿ ಹೋಗುತ್ತದೆಯೋ ಅದೇ ಲೌಕಿಕ ಹಾಗೂ ದೇಹಧಾರಿ ವಸ್ತುವನ್ನು ಪರಿವರ್ತನೆ ಮಾಡಿಕೊಳ್ಳುತ್ತಾ ಈ ದೇಹಧಾರಿ ಹಾಗೂ ಲೌಕಿಕ ವಸ್ತುವಿನ ತುಲನೆಯಲ್ಲಿ ಅಲೌಕಿಕ, ಅವಿನಾಶಿ ವಸ್ತುವನ್ನು ಸ್ಮೃತಿಗೆ ತಂದುಕೊಳ್ಳಿರಿ. ಹೇಗೆ ಯಾರಾದರೂ ದೇಹಧಾರಿಗಳಲ್ಲಿ ವೃತ್ತಿ ಚಂಚಲವಾದರೆ, ಸಂಬಂಧದಲ್ಲಿ ಚಂಚಲವಾದರೆ ಅದೇ ಸಂಬಂಧದ ಪ್ರ್ಯಾಕ್ಟಿಕಲ್ ಅನುಭವವನ್ನು ಅವಿನಾಶಿ ತಂದೆಯ ಮುಖಾಂತರ ಅನುಭವ ಮಾಡಿ. ಉದಾಹರಣೆಗೆ ಪ್ರವೃತಿಯ ಸಂಬಂಧದಲ್ಲಿ ವೃತ್ತಿಯು ಚಂಚಲವಾದರೆ ಇದೇ ಸಂಬಂಧದ ಅಲೌಕಿಕ ಅನುಭವವನ್ನು ಸರ್ವಸಂಬಂಧ ನಿಭಾಯಿಸುವಂತಹ

ತಂದೆಯಿಂದ ಪ್ರಾಪ್ತಿ ಮಾಡಿಕೊಳ್ಳಿರಿ. ಯಾವಾಗ ಪ್ರಾಪ್ತಿ ಪೂರ್ತಿಯಾಗುವುದೋ ಆಗ ಚಂಚಲತೆಯ ನಿವೃತ್ತಿಯಾಗುವುದು. ತಿಳಿಯಿತೇ? ಒಂದುವೇಳೆ ಸರ್ವಸಂಬಂಧ ಹಾಗೂ ಸರ್ವಪ್ರಾಪ್ತಿ ಒಬ್ಬ ತಂದೆಯ ಮೂಲಕ ಆಗಿಬಿಟ್ಟರೆ ಅನ್ಯಕಡೆ ಬುದ್ಧಿ ಚಂಚಲವಾಗುವುದೇ? ಅಂದಮೇಲೆ ಒಂದೇ ದೊಡ್ಡದಕ್ಕಿಂತ ದೊಡ್ಡ ಬಂಧನವಾಗಿದೆ. ತಮ್ಮ ಚಂಚಲವೃತ್ತಿಯನ್ನು ಸರ್ವಸಂಬಂಧಗಳ ಬಂಧನದಲ್ಲಿ ಒಬ್ಬ ತಂದೆಯ ಜೊತೆ ಬಂಧಿಸಿರಿ. ಆಗ ಸರ್ವಚಂಚಲತೆಯು ಸಹಜವಾಗಿ ಸಮಾಪ್ತಿ ಯಾಗುವುದು. ಮತ್ತ್ಯಾವುದೇ ಸಂಬಂಧ ಹಾಗೂ ಪ್ರಾಪ್ತಿಯ ಸಾಧನಗಳು ಕಾಣಿಸುವುದೇ ಇಲ್ಲ ಅಂದಮೇಲೆ ವೃತ್ತಿ ಹೋಗುವುದಾದರೂ ಎಲ್ಲಿಗೆ ತಮ್ಮನ್ನು ತಾವು ಈ ರೀತಿ ಬಂಧಿಸಿಕೊಳ್ಳಿರಿ, ಹೇಗೆ ದೃಷ್ಟಾಂತವು ಪ್ರಸಿದ್ಧವಾಗಿದೆ. ಸೀತೆಗೆ ಗೆರೆಯ ಒಳಗಡೆಯಿರುವ ಆದೇಶವಿತ್ತು ಹಾಗೆಯೇ ಪ್ರತೀ ಹೆಜ್ಜೆಯನ್ನಿಡುತ್ತಾ, ಪ್ರತೀ ಸಂಕಲ್ಪ ಮಾಡುತ್ತಾ ತಂದೆಯ ಆದೇಶದ ರೇಖೆಯ ಒಳಗಡೆಯಿದ್ದೇವೆಂದು ತಿಳಿದುಕೊಳ್ಳಿ, ಸಂಕಲ್ಪದಲ್ಲಿಯೂ ಆದೇಶದ ಗೆರೆಯಿಂದ ಹೊರಬರುತ್ತೀರೆಂದರೆ ವ್ಯರ್ಥಮಾತುಗಳು ದಾಳಿ ಮಾಡುತ್ತವೆ ಆದ್ದರಿಂದ ಸದಾ ಆದೇಶದ ರೇಖೆಯ ಒಳಗಡೆಯಿರಿ ಆಗ ಸುರಕ್ಷಿತವಾಗಿರುತ್ತೀರಿ. ಯಾವುದೇ ಪ್ರಕಾರದ ರಾವಣನ ಸಂಸ್ಕಾರ ದಾಳಿ ಮಾಡುವುದಿಲ್ಲ ಹಾಗೂ ಸಮಯ ಪ್ರತಿಸಮಯ ಈ ಮಾತುಗಳನ್ನು ಕಳೆಯುವುದರಲ್ಲಿ ತಮ್ಮ ಸಮಯವನ್ನು ವ್ಯರ್ಥವಾಗಿ ಕಳೆಯುವುದಿಲ್ಲ. ದಾಳಿಯೂ ಆಗಬಾರದು, ಪದೇ-ಪದೇ ಸಮಯವೂ ವ್ಯರ್ಥವಾಗಿ ಹೋಗಬಾರದು ಆದ್ದರಿಂದ ಈಗ ಆದೇಶವನ್ನು ಸದಾ ನೆನಪಿಟ್ಟುಕೊಳ್ಳಿರಿ. ಈ ರೀತಿ ಆಜ್ಞಾಕಾರಿಗಳಾಗುವುದಕ್ಕಾಗಿಯೇ ಭಟ್ಟಿಯಲ್ಲಿ ಬಂದಿದ್ದೀರಲ್ಲವೆ ಅಂದಮೇಲೆ ಇದೇ ಅಭ್ಯಾಸ ಮಾಡಿಕೊಂಡು ಹೋಗಿರಿ. ಒಂದು ಸಂಕಲ್ಪವೂ ಆದೇಶವಿಲ್ಲದೆ ಬರಬಾರದು. ಇಂತಹ ಆಜ್ಞಾಕಾರಿಗಳ ತಿಲಕವು ಸದಾ ಸ್ಮೃತಿಯಲ್ಲಿರಲಿ. ಈ ತಿಲಕವನ್ನಿಟ್ಟುಕೊಳ್ಳಿರಿ ನಂತರ ನೋಡಿರಿ- ಫಸ್ಟ್ ನಂಬರಿನಲ್ಲಿ ಯಾರು ಬರುತ್ತಾರೆ! ಈ ತಿಲಕವನ್ನು ಧಾರಣೆ ಮಾಡಿಕೊಳ್ಳುವುದರಲ್ಲಿ ಫಸ್ಟ್ ಪ್ರೈಜ್ ತೆಗೆದುಕೊಳ್ಳುವವರು ಯಾರಾಗುತ್ತಾರೆ? ಒಳ್ಳೆಯದು-

ಅವ್ಯಕ್ತ ಮುರಳಿ 26-10-1971.

***ಕರ್ಮದ ಆಧಾರ ವೃತ್ತಿ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪಾಂಡವ ಸ್ವರೂಪವನ್ನು ನಿರಂತರ ಸ್ಮೃತಿಯಲ್ಲಿಟ್ಟುಕೊಂಡು ಸದಾ ಯಾತ್ರೆ ಮತ್ತು ಗುರಿಯನ್ನು ಸ್ಮೃತಿಯಲ್ಲಿಟ್ಟುಕೊಂಡಿದ್ದೇನೆ.

2. ನನಗೆ ಒಬ್ಬ ತಂದೆಯ ವಿನಃ ಮತ್ಯಾರೂ ಇಲ್ಲ, ಒಬ್ಬ ತಂದೆಯೊಂದಿಗೆ ಸರ್ವ ಸಂಬಂಧಗಳು ಸರ್ವಪ್ರಾಪ್ತಿಗಳು ಇವೆ ಎಂಬ ವೃತ್ತಿಯಲ್ಲಿ ಸದಾ ಇರುತ್ತಾ ಸದಾ ಸೋದರ ದೃಷ್ಟಿಯೊಂದಿಗೆ ವೃತ್ತಿಯನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಂಡು ಸ್ಥಿರವಾಗಿ ಇದ್ದೇನೆ.

3. ನಾನು ನಿರ್ಮಾನ, ನಿರ್ಮಾಣ, ನಿರ್ವಾಣ, ಈ ಮೂರರ ಸ್ಮೃತಿಯಿಂದ ಚರಿತ್ರೆ, ಕರ್ತವ್ಯ ಮತ್ತು ಸ್ಮೃತಿಯನ್ನು ವೃತ್ತಿಯಲ್ಲಿಟ್ಟುಕೊಂಡ ಸಮರ್ಥ ಸ್ವರೂಪ.

4. ನಾನು ವೃತ್ತಿ ಮತ್ತು ವಾಣಿಯನ್ನು ಶಕ್ತಿಶಾಲಿಯಾಗಿಸಿಕೊಂಡು ಕರ್ಮವನ್ನು ಕೂಡ ಯತಾರ್ಥ ಮತ್ತು ಶಕ್ತಿಶಾಲಿಯಾಗಿ ತಯಾರು ಮಾಡಿಕೊಂಡಿರುವ ಶಕ್ತಿ ಸ್ವರೂಪ.

5. ನಾನು ಸದಾ ಸ್ವಯಂ ಅನ್ನು ವಿಶ್ವ ನಿರ್ಮಾಣ ಮಾಡುವ ಇಂಚಾರ್ಜ್ ಎಂದು ಭಾವಿಸಿ ಸದಾ ಬ್ಯಾಟರಿಯನ್ನು ಚಾರ್ಜ್ ಮಾಡಿಕೊಂಡಿದ್ದೇನೆ.

6. ನಾನು ವೃತ್ತಿಯಿಂದ ವಾಯುಮಂಡಲವನ್ನು ಸತೋ ಪ್ರಧಾನವಾಗಿ ತಯಾರು ಮಾಡುವ ಶ್ರೇಷ್ಠ ಇಂಚಾರ್ಜ್ ಆಗಿದ್ದೇನೆ.

7. ನಾನು ಸರ್ವ ಸಂಬಂಧಗಳನ್ನು ಪ್ರತ್ಯಕ್ಷವಾಗಿ ಅವಿನಾಶಿಯಾಗಿ ತಂದೆಯೊಂದಿಗೆ ಅನುಭವ ಮಾಡಿಕೊಂಡು ಪ್ರಾಪ್ತಿಯನ್ನು ಪಡೆದಿದ್ದೇನೆ.

8. ನಾನು ಸದಾ ಪ್ರತಿ ಹೆಜ್ಜೆಯನ್ನು ಇಡುತ್ತಾ, ಪ್ರತಿ ಸಂಕಲ್ಪ ಮಾಡುತ್ತಾ ಸದಾ 'ತಂದೆಯ ಆಜ್ಞೆ' ಎಂಬ ರೇಖೆಯೊಳಗೆ ಇರುತ್ತಾ ರಕ್ಷಣೆಯನ್ನು ಪಡೆದಿದ್ದೇನೆ.

9. ನಾನು ಒಂದು ಸಂಕಲ್ಪವನ್ನೂ ಆಜ್ಞೆಯಿಲ್ಲದೆ ಮಾಡದ ಆಜ್ಞಾಕಾರಿ.

10. ನಾನು ಆಜ್ಞಾಕಾರಿ ಎಂಬ ತಿಲಕವನ್ನು ಸದಾ ಸ್ಮೃತಿಯಲ್ಲಿಟ್ಟುಕೊಂಡು ಮೊದಲ ನಂಬರ್ ಪಡೆದಿದ್ದೇನೆ.